ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ
ಸಿಸಿ ಸಂಃ **402/2016**

| | | |
|---|---|---|
| ಸಾಕ್ಷಿಯ ಹೆಸರುಃ | ಜಯಮ್ಮ | **CW.1.** |
| ತಂದೆ/ಗಂಡನ ಹೆಸರುಃ | ಗೋವಿಂದೇಗೌಡ | **EBC** |
| ವಯಸ್ಸುಃ | **54** ವರ್ಷ | ಪ್ರಮಾಣೀಕರಿಸಿದ ದಿಃ **05-08-2021** |
| ಉದ್ಯೋಗಃ | ಕೂಲಿ | |
| ವಾಸಸ್ಥಳಃ | ಜವನಿಕುಪ್ಪೆ ಗ್ರಾಮ, ಪಿರಿಯಾಪಟ್ಟಣ ತಾಃ | |

ದೋಷಾರೋಪಣೆ ರಚಿಸುವ ಪೂರ್ವದ ಸಾಕ್ಷ್ಯ ವಿಚಾರಣೆಃ ಶ್ರೀ ಹೆಚ್.ಕೆ.ಎಸ್ ವಕೀಲರಿಂದ

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಗಂಡ. ಈಗ್ಗೆ **40** ವರ್ಷಗಳ ಹಿಂದೆ ನನ್ನ ಮತ್ತು ಆರೋಪಿಯ ನಡುವೆ ಚುಂಚನಕಟ್ಟೆಯ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ವಿವಾಹವಾಗಿರುತ್ತದೆ. ನನ್ನ ವಿವಾಹವನ್ನು ನನ್ನ ತಂದೆಯೇ ಮಾಡಿದ್ದು, ನನಗೆ **100** ಗ್ರಾಂ ಚಿನ್ನ ಹಾಗೂ ಆರೋಪಿಗೆ **50** ಸಾವಿರ ವರದಕ್ಷಿಣೆ ಕೊಟ್ಟು ಮದುವೆ ಮಾಡಿರುತ್ತಾರೆ. ನನ್ನ ವಿವಾಹ ಹಿಂದೂ ಸಂಪ್ರದಾಯದಂತೆ ನಡೆದಿರುತ್ತದೆ. ನಾನು ಮದುವೆಯಾದ **2** ವರ್ಷಗಳ ಕಾಲ **1** ನೇ ಆರೋಪಿಯೊಂದಿಗೆ ಚೆನ್ನಾಗಿದ್ದು, ಆ ಸಮಯದಲ್ಲಿ ನಾನು ಗರ್ಭಿಣಿಯಾಗಿದ್ದು, ನನ್ನನ್ನು ನನ್ನ ತಂದೆಯ ಮನೆಗೆ ಹೆರಿಗೆಗೆ ಕಳುಹಿಸಿಕೊಟ್ಟರು. ನನಗೆ ಮಗು ಜನಿಸಿದ ನಂತರ ಸದರಿ ವಿಷಯವನ್ನು ನನ್ನ ಗಂಡನಿಗೆ ಹೇಳಿ ಕಳುಹಿಸಿದ್ದು, ನನಗೆ ಜನಿಸಿದ ಮಗು ಅಂಗವಿಕಲ ಗಂಡು ಮಗು ಆಗಿದ್ದರಿಂದ **1** ನೇ ಆರೋಪಿಯು ಮಗುವನ್ನು ನೋಡಲು ಬರಲಿಲ್ಲ. ಅವರು ಏಕೆ ಬರಲಿಲ್ಲ ಎಂದು ನಾನು ನನ್ನ ಗಂಡನ ಮನೆಗೆ ಬಂದೆ. ಆಗ ಆರೋಪಿಯು ಇಲ್ಲಿಗೆ ಏಕೆ ಬಂದಿದ್ದೀಯಾ, ಬರಬೇಡ ಹೋಗು ಎಂದು ಹೇಳಿದರು. **1** ನೇ ಆರೋಪಿಯದು ಒಂಟಿ ಮನೆಯಾಗಿದ್ದರಿಂದ ನಾನು ಭಯಪಟ್ಟುಕೊಂಡು ಅಲ್ಲಿಂದ ವಾಪಸು ನನ್ನ ತಾಯಿಯ ಮನೆಗೆ ಬಂದೆ. ನಂತರ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ಪೊಲೀಸರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಆನಂತರ ಹುಣಸೂರಿನ ಡಿ.ವೈ.ಎಸ್.ಪಿ ಗೆ ದೂರು ಕೊಟ್ಟಿದ್ದು, ಅವರೂ ಸಹ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕಾರಣ ನನಗೆ ನ್ಯಾಯ ಕೊಡಿಸಬೇಕು ಎಂದು ನ್ಯಾಯಾಲಯಕ್ಕೆ ಬಂದಿದ್ದೇನೆ.

ನನ್ನನ್ನು ನನ್ನ ಗಂಡ ಅವರ ಮನೆಗೆ ಸೇರಿಸದ ಕಾರಣ ನಾನು ನನ್ನ ತಾಯಿಯ ಮನೆಗೆ ವಾಪಸು ಬಂದ ಸ್ವಲ್ಪ ದಿನಗಳ ನಂತರ ಆರೋಪಿಯು **2** ನೇ ಮದುವೆಯಾಗಿ ನನಗೆ ಮೋಸ ಮಾಡಿದ್ದಾರೆಂದು ಗೊತ್ತಾಯಿತು. ನನ್ನ ಗಂಡನ **2** ನೇ ಹೆಂಡತಿಯ ಹೆಸರು ಮಲ್ಲಿಗೆ ಆಗಿರುತ್ತದೆ. ನನ್ನ ಮತ್ತು ನನ್ನ ಗಂಡನ ನಡುವೆ ಕಾನೂನುಬದ್ಧವಾಗಿ ಯಾವುದೇ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಆಗಿರುವುದಿಲ್ಲ. ನಾನು ನನ್ನ ಗಂಡ **2** ನೇ ಮದುವೆಯಾಗಿದ್ದ ವಿಷಯವನ್ನು ಅವರ ಮನೆಗೆ ಹೋಗಿ ಕೇಳಿದೆ. ಆಗ ಅವರು ನಿನ್ನನ್ನು ಮನೆಗೆ ಕೂಡುವುದಿಲ್ಲ, ನೀನು ನನಗೆ ಬೇಡ, ನನ್ನ ಮನೆಯಿಂದ ಹೋಗು ಎಂದು ಹೇಳಿದರು. ನಂತರ ಅವರು ನನಗೆ

ಹೊಡೆದು ಕೊಲೆ ಬೆದರಿಕೆ ಹಾಕಿದರು. ಅದರಿಂದಾಗಿ ನಾನು ಹೆದರಿಕೊಂಡು ನನ್ನ ತಾಯಿಯ ಮನೆಗೆ ಬಂದೆ. ಆರೋಪಿತರಿಬ್ಬರೂ ನನಗೆ ನಮ್ಮ ಮನೆಗೆ ಬರಬೇಡ, ನಿನಗೆ ಆಸ್ತಿ ಕೊಡುವುದಿಲ್ಲ ಎಂದು ಹೇಳಿ ನನ್ನ ಜೊತ ಗಲಾಟೆ ಮಾಡಿದ್ದರು. 2 ನೇ ಆರೋಪಿ ನನ್ನನ್ನು ಹೊಡೆಯಲು ಬಂದು ಕೊಲೆ ಬೆದರಿಕೆ ಹಾಕಿ ಮನೆಯಿಂದ ಹೊರಗೆ ಹೋಗು ಎಂದು ಹೇಳಿದರು. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿಯು ತಾನು ಮತ್ತು ತನ್ನ ಮಕ್ಕಳು ಸೇರಿಕೊಂಡು ತನ್ನ ತಮ್ಮನ ಹೆಂಡತಿ ಲತಾಳನ್ನು ಕೊಲೆ ಮಾಡಿದ್ದು, ನಿನ್ನನ್ನೂ ಅದೇ ರೀತಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ಆಗ ನಾನು ಪುನಃ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದು, ನಂತರ ಹುಣಸೂರಿನ ಡಿ.ವೈ.ಎಸ್.ಪಿ ಗೆ ಸಹ ದೂರು ಕೊಟ್ಟಿದ್ದು, ಅವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕಾರಣ ನಾನು ನ್ಯಾಯಾಲಯಕ್ಕೆ ನನಗೆ ನ್ಯಾಯ ಕೊಡಿಸಿಕೊಡಬೇಕೆಂದು ಬಂದೆನು. ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಬೆಕೆಂದು ನ್ಯಾಯಾಲಯದಲ್ಲಿ ಕೇಳಿಕೊಳ್ಳುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

1) ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಕ್ಕೆ ಪಿರಿಯಾಪಟ್ಟಣ ಪೊಲೀಸರು ನೀಡಿದ ಸ್ವೀಕೃತಿ.

2) ಪೊಲೀಸ್ ಉಪಾಧೀಕ್ಷರು, ಹುಣಸೂರು ಉಪ ವಿಭಾಗ ರವರಿಗೆ ನಾನು ದಾಖಲಿಸಿದ ದೂರಿನ ಪ್ರತಿ.

3) ವಿವಾಹ ಆಮಂತ್ರಣ ಪತ್ರಿಕೆ.

4) ದಿಃ 15.01.2012 ರ ದಾನಪತ್ರದ ದೃಢೀಕೃತ ನಕಲು.

5) ಮಾಲಂಗಿ ಗ್ರಾಮದ ಸ.ನಂ.64ಃಪಿ1 ರ ಪಹಣಿ ಪತ್ರಿಕೆ.

6) ಎಂ.ಆರ್.ನಂ.ಹೆಚ್66 ರ ಮ್ಯುಟೇಶನ್ ರಿಜಿಸ್ಟರ್ ಪ್ರತಿಯ ದೃಢೀಕೃತ ನಕಲು.

7) ಕ್ರಿ.ಮಿಸ್.ನಂ.35ಃ2015 ರಲ್ಲಿ ಎದುರುದಾರರು ಸಲ್ಲಿಸಿರುವ ತಕರಾರಿನ ದೃಢೀಕೃತ ನಕಲು.

ಮೇಲ್ಕಂಡ ದಾಖಲೆಗಳನ್ನು ನಿಪಿ - 1 ರಿಂದ 7 ಎಂದು ಗುರುತಿಸಲಾಯಿತು.

ಈ ಹಂತದಲ್ಲಿಪಿರ್ಯಾದುದಾರರ ಪರ ವಕೀಲರು ಸಾಕ್ಷಿಯ ಮುಂದುವರಿದ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಪಿರಿಯಾಪಟ್ಟಣ